ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅ ವರದಿಯು ಸಲಹಾ ರೂಪದಲ್ಲಿರುತ್ತದೆ. ವರದಿಯನ್ನು ಬರೆಯುವುದಕ್ಕೆ ಮುಂಚೆ ನಿರ್ದಿಷ್ಟವಾದ ಸಲಹೆಗಳನ್ನು ಸರ್ಕಾರದವರು ಕೊಟ್ಟರೆ ನಿಷ್ಪಕ್ಷಪಾತವಾಗಿ ಜನಭಿಪ್ರಾಯವನ್ನು ಸಂಗ್ರಹಿಸಿ ಹೇಳುವುದಕ್ಕೆ ಅವಕಾಶ ಇಲ್ಲದೆ ಹೋಗುತ್ತದೆ. ಆದ್ದರಿಂದ ಅವರು ವರದಿಯನ್ನು ಕೊಡುವುದಕ್ಕೆ ಮುಂಚೆ ಅವಶ್ಯಕ ಎಂದು ಕಂಡುಬಂದ ಸ್ಥಳಗಳಲ್ಲಿ ಸಂಚಾರ ಮಾಡಿ ಅಭಿಪ್ರಾಯಗಳನ್ನು ತಿಳಿದುಕೊಂಡು ವರದಿಯನ್ನು ಒಪ್ಪಿಸುತ್ತಾರೆ.

ಶ್ರೀ ಬಿ. ವಿ. ಬಣಕಾರ್.—75 ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ನಗರಗಳನ್ನು ಜಿಲ್ಲಾ ಕೇಂದ್ರಗಳನ್ನಾಗಿ ಮಾಡುವ ವಿಚಾರ ಇದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕೆಲವು ನಗರಗಳಲ್ಲಿ ಹೆಚ್ಚು ಜನಸಂಖ್ಯೆ ಇದೆ. ಆದರೆ ಎಲ್ಲಾ ನಗರಗಳನ್ನೂ ಜಿಲ್ಲಾ ಕೇಂದ್ರಗಳನ್ನಾಗಿ ಮಾಡುವುದು ಕಷ್ಟ. ಆದ್ದರಿಂದ ಪರಿಸ್ಥಿತಿಯನ್ನು ನೋಡಿಕೊಂಡು ವರದಿ ಕೊಟ್ಟ ಮೇಲೆ ಅಂತ್ಯ ತೀರ್ಮಾನವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಎನ್. ವೀರಪ್ಪಗೌಡ.—ತಾಲ್ಲೂಕು ಮತ್ತು ಜಿಲ್ಲೆಗಳನ್ನು ವಿಂಗಡನೆ ಮಾಡುವಾಗ ಹೆಚ್ಚಿಗೆ ಪ್ರದೇಶಕ್ಕೆ ಮಾನ್ಯತೆ ಕೊಟ್ಟು ರೈತರು ನೇರವಾಗಿ ಬಂದು ಹೋಗತಕ್ಕಂಥಾ ಮತ್ತು ಅವಶ್ಯಕತೆ, ಅನುಕೂಲ ಪಡೆಯುವುದನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಮಲೆನಾಡು ಪ್ರದೇಶದಲ್ಲಿ ವಿಸ್ತೀರ್ಣ ಜಾಸ್ತಿ ಇರುತ್ತದೆ. ಜನಸಂಖ್ಯೆ ಕಡಿಮೆ ಇರುತ್ತದೆ. ಆದಳಿತ ಸೌಕರ್ಯ ಸೌಲಭ್ಯ ಕಲ್ಪಿಸುವುದಕ್ಕೆ ಕಷ್ಟ. ಆದ್ದರಿಂದ ಜನಗಳಿಗೆ ಅನುಕೂಲವನ್ನು ಕಲ್ಪಿಸುವುದು, ಆಡಳಿತ ದಕ್ಷತೆಯನ್ನು ಹೆಚ್ಚು ಮಾಡುವುದು ಇವುಗಳನ್ನೆಲ್ಲಾ ದೃಷ್ಟಿಯಲ್ಲಿಟ್ಟುಕೊಂಡು ಆ ಭಾಗಗಳನ್ನು ಪುನರ್ ವಿಂಗಡಣೆ ಮಾಡುತ್ತೇವೆ.

NON-PAYMENT OF SALARY TO THE STAFF OF BUNTWAL TALUK OFFICE

349. Sri B. V. KAKKILAYA (Buntwal).—

Will the Minister for Revenue be pleased to state :—

(a) when was Buntawal Taluk constituted as a separate taluk in South Kanara District;

(b) whether it is a fact that staff of the Taluk Office could not draw salaries for three months in 1973 because of the delay in according to sanction;

(c) the reason for not granting permanent sanction and not making necessary provision in the annual budget ?

Sri N. HUTCHAMASTHY GOWDA (Minister for Revenue)—

(a) 1st October 1959.

(b) Yes, for two months.

(c) The propoosal of making these posts permanent is under consideration of the Government.

ಶ್ರೀ ಬಿ. ವಿ. ಕಕ್ಕಿಲಾಯ.—ಬಂಟವಾಳ ತಾಲ್ಲೂಕನ್ನು 1-10-1959ರಲ್ಲಿ ಎಂದರೆ 13 ವರ್ಷಗಳ ಹಿಂದೆ ಪ್ರತ್ಯೇಕ ತಾಲ್ಲೂಕನ್ನಾಗಿ ರಚಿಸಲಾಯಿತು, ಆದರೆ ಇನ್ನೂ ಕೂಡ ಆ ತಾಲ್ಲೂಕು ಕಚೇರಿಯ ಸಿಬ್ಬಂದಿಯನ್ನು ಖಾಯಂ ಮಾಡಿಲ್ಲ. ಅದು ಆ ರೀತಿ ವಿಳಂಬವಾಗುವುದಕ್ಕೆ ಕಾರಣ ವೇನು ? ಅದು ಯಾವಾಗ ಆಗುತ್ತದೆ ಎಂಬುದನ್ನು ಹೇಳುತ್ತೀರಾ ?

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾನು ಅಧಿಕಾರವನ್ನು ವಹಿಸಿಕೊಂಡ ಕೂಡಲೇ ಅವುಗಳಿಗೆ ಖಾಯಂ ವ್ಯವಸ್ಥೆ ಮಾಡಬೇಕು ಎಂದು ಯಾವ ಯಾವ ತಾಲ್ಲೂಕುಗಳು ಆ ರೀತಿ ವರ್ಷ ವರ್ಷ ಮುಂಜೂರಾತಿ ಪಡೆಯುತ್ತವೆ. ಅವುಗಳಿಗೆ ಎಷ್ಟೆಷ್ಟು ಸಿಬ್ಬಂದಿ ಇರಬೇಕು ಎನ್ನುವುದರ ಬಗ್ಗೆ ಜಿಲ್ಲಾಧಿಕಾರಿಗಳು ಮತ್ತು ಡಿವಿಜನಲ್ ಕಮೀಷನರುಗಳಿಂದ ವರದಿಯನ್ನು ತರಿಸಿಕೊಂಡು ಒಂದು ಅಂತಿಮ ತೀರ್ಮಾನ ತೆಗೆದುಕೊಳ್ಳಬೇಕು ಎಂದು ದೃಷ್ಟಿಯಲ್ಲಿ ಇಟ್ಟುಕೊಂಡಿದ್ದೆ. ಕಳೆದ ವರ್ಷ ಜಿಲ್ಲಾಧಿಕಾರಿಗಳು ಮತ್ತು ಡಿವಿಜನಲ್ ಕಮೀಷನರಿಂದ ಇದರ ಬಗ್ಗೆ ವರದಿ ಬರುವುದು ಎರಡು ತಿಂಗಳು ತಡವಾಯಿತು. ಆದ್ದರಿಂದ ಸಿಬ್ಬಂದಿಗೆ ಸಂಬಳವನ್ನು ಕೊಡುವುದು ತಡವಾಯಿತು. ನಾನು ಇದನ್ನು ತಿಳಿದ ಕೂಡಲೇ ಖಾಯಂ ವ್ಯವಸ್ಥೆ ಮಾಡುವುದು ಹಾಗಿರಲಿ ಸಂಬಳ ಕೊಡುವುದು ಕೊಡಬೇಕು ಎಂದು ಅವರಿಗೆ ಸಂಬಳ ಕೊಡುವ ವ್ಯವಸ್ಥೆ ಮಾಡಿದ್ದೇನೆ, 18-1-1974 ರಲ್ಲಿ ಡೆಪ್ಯುಟಿ ಕಮೀಷನರು ಮತ್ತು ಡಿವಿಜನಲ್ ಕಮೀಷನರಿಂದ ವರದಿ ಬಂದಿದೆ. ಈ ವರದಿಯಲ್ಲಿ ಖಾಯಂ ಸಿಬ್ಬಂದಿ ಎಷ್ಟು ಬೇಕು ಎನ್ನುವುದು ಬಂದಿದೆ. ಅದರ ಜೊತೆಗೆ ಯಳಂದೂರು, ಶೃಂಗೇರಿ ಸೂಳ್ಯ ಈ ತಾಲ್ಲೂಕುಗಳ ವರದಿಯನ್ನು ತರಿಸಿಕೊಂಡು ಅದಷ್ಟು ಜಾಗ್ರತೆ ಇದನ್ನು ಮಾಡುತ್ತೇವೆ.

ಶ್ರೀ ಬಿ. ವಿ. ಕಕ್ಕಿಲಾಯ.—ಅಕೌಂಟೆಂಟ್ ಜನರಲ್ ಅವರು ಈ ರೀತಿ ವರ್ಷ ವರ್ಷ 6 ತಿಂಗಳಿಗೆ ಒಂದು ಸಾರಿ ಮುಂಜೂರಾತಿ ಕೊಡುವುದು ತೊಂದರೆಯಾಗುತ್ತದೆ. ಆದ್ದರಿಂದ ಆ ಸಿಬ್ಬಂದಿಗೆ ಪಗಾರ ಕೊಡುವುದಕ್ಕೆ ಮುಂಜೂರಾತಿ ಕೊಡುವುದಿಲ್ಲ ಎಂದು ಬರೆದಿರುವುದರಿಂದ ಈ ಸಂಬಳ ಕೊಡುವುದಕ್ಕೆ ತೊಂದರೆಯಾಗುತ್ತದೆ. ಆದ್ದರಿಂದ ಅದನ್ನು ಅದಷ್ಟು ಜಾಗ್ರತೆ ಈ ವರ್ಷದಲ್ಲೇ ಅವರನ್ನು ಖಾಯಂ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹೋದ ವರ್ಷದ ಹಾಗೆ ತೊಂದರೆಯಾಗಬಾರದು ಎಂದು ಆಗಲೇ ಅದನ್ನು 6 ತಿಂಗಳುಗಳ ಕಾಲ ಮುಂದುವರಿಸಿದ್ದೇವೆ. 6 ತಿಂಗಳಿಗೆ ಮುಂಜೂರಾತಿ ದೊರೆತಿವೆ. ಆ ಪಾಯಿದೆ ಮುಗಿಯುವುದರೊಳಗಾಗಿ ಆ ಬಗ್ಗೆ ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎ. ಶಂಕರ ಆಳ್ವ.—ಬಂಟವಾಳದಲ್ಲಿರತಕ್ಕ ತಾಲ್ಲೂಕು ಕಚೇರಿಯಲ್ಲಿ ಒಬ್ಬರು ತಹಸೀಲ್ದಾರರು ಇದ್ದರು. ಒಬ್ಬರು ಡೆಪ್ಯುಟಿ ತಹಶೀಲ್ದಾರರು ಇದ್ದರು. ಮತ್ತು ಖಾಯಂ ಆದ ಸಿಬ್ಬಂದಿಯೂ ಇತ್ತು. ಹಾಗಿದ್ದರೂ ಕೂಡ ಅವರಿಗೆ ಸಂಬಳ ಕೊಡದೇ ಇರುವುದಕ್ಕೆ ಕಾರಣವೇನು?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹಿಂದೆ ಇಲ್ಲಿ ಒಬ್ಬರು ತಹಶೀಲ್ದಾರರು, ಒಬ್ಬರು ಡೆಪ್ಯುಟಿ ತಹಶೀಲ್ದಾರರು, ಮೂರು ಜನ ಫಸ್ಟ್ ಡಿವಿಜನ್ ಕ್ಲಾರ್ಕ್ಸ್, 12 ಜನ ಸೆಕೆಂಡ್ ಡಿವಿಜನ್ ಕ್ಲಾರ್ಕ್ಸ್ ಒಬ್ಬರು ಟೈಪಿಸ್ಟ್ 4 ಜನ ಜವಾನರು ಇದ್ದರು. ಆ ಸಿಬ್ಬಂದಿ ವರ್ಗದವರೆಲ್ಲರಿಗೂ ಎರಡು ತಿಂಗಳು ತೊಂದರೆಯಾಗಿದೆ.

SUPPLY OF ELECTRICITY TO MARKONAHALLI AGRICULTURAL COLONY

411. Sri M. H. JAYAPRAKASH NARAYANA (Sirsi).—

Will the Minister for Public Works and Electricity be pleased to state :—

(a) whether it is a fact that sanction was accorded in letter No. SEGR 16383-86, dated 30th January 1962 from Superintendents Office, Bangalore Electric Circle under rural electrification scheme for supplying electricity to agricultural colony and 5 irrigation wells in Markonahalli, Amruthur Hobli of Kunigal Taluk at the estimated cost of Rs. 19,233 ;

(b) whether representations have been received from the people of that place complaining that the said scheme has not been implemented so far ;